ಈ) ಗಜೇಂದ್ರ ಗಡ ನಗರದ ಸಮೀಪ ಕಾಲಕಾಲೇಶ್ವರ ಗುಡ್ಡದ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹನುಮಸಾಗರ ಹಾಗೂ ಮಾಲಗತ್ತಿ ಗುಡ್ಡಗಳ ಮೇಲೆ ಈಗಾಗಲೇ ಗಾಳಿ ಮಾಪನ ಸಮೀಕ್ಷೆ ನಡೆಸಲಾಗಿದೆ. ಹಾಗೂ ಹನುಮಸಾಗರದಲ್ಲಿ 1.92 ಮೆಗಾವ್ಯಾಟ್ ಸಾಮರ್ಥ್ಯದ ಗಾಳಿ ವಿದ್ಯುತ್ ಘಟಕವನ್ನು ಸ್ಥಾಪಿಸಲಾಗಿದೆ. ಇನ್ನೂ ಯಾರಾದರೂ ಖಾಸಗಿಯವರು ಮುಂದೆ ಬಂದಲ್ಲಿ ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣ ಪ್ರದೇಶಗಳಿಗೆ ಹ್ಯಾಮ್ಲೆಟ್ ಯೋಜನೆ ಜಾರಿ

1210 (1630) ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಹ್ಯಾಮ್ಲೆಟ್ ಯೋಜನೆಯಲ್ಲಿ ಮಂಜೂರಾದ ಕಾರ್ಯಕ್ರಮಗಳನ್ನು ಇಲಾಖೆಯೇ ಅನುಷ್ಠಾನ ಮಾಡುತ್ತದೆಯೇ ಅಥವಾ ಟರ್ನ್‌ಕೀ ವ್ಯವಸ್ಥೆಯಲ್ಲಿ ಖಾಸಗಿ ಗುತ್ತಿಗೆದಾರರಿಂದ ಮಾಡಿಸಲಾಗುತ್ತದೆಯೆ;

ಆ) ಈ ವರ್ಷ ಮಂಜೂರಾದ ಹ್ಯಾಮ್ಲೆಟ್‌ಗಳನ್ನು ಮಾರ್ಚ್ ಕೊನೆಯೊಳಗೆ ಅನುಷ್ಠಾನ ಮಾಡುವ ಯೋಚನೆ ಇದೆಯೆ;

ಇ) ಅನುಷ್ಠಾನದ ಹಂತದಲ್ಲಿ ಏನಾದರೂ ಸಮಸ್ಯೆ ಇದೆಯೆ?

ಶ್ರೀ ವೀರಕುಮಾರ. ಅ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗ್ರಾಮೀಣ ಪ್ರದೇಶಗಳಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣದ ಕಾಮಗಾರಿಯನ್ನು ಬಹುಪಾಲು ಇಲಾಖಾ ವತಿಯಿಂದಲೇ ಈಗ ಏರ್ಪಡಿಸಲಾಗುತ್ತಿದೆ. ಅದಾಗ್ಯೂ , ಕೆಲವೆಡೆ ಪ್ರಾಯೋಗಿಕವಾಗಿ ಟರ್ನ್‌ಕೀ ಆಧಾರದ ಮೇಲೆ ಈ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆ) 2000-2001 ನೇ ಸಾಲಿನಲ್ಲಿ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾದ ಹ್ಯಾಮ್ಲೆಟ್‌ಗಳನ್ನು ವಿದ್ಯುದೀಕರಿಸಲು ಖಾತರಿಯನ್ನು ನೀಡುವ ಬಗ್ಗೆ ಪರಿಶೀಲಿಸುತ್ತದೆ.

ಇ) ಖಾತರಿಯನ್ನು ನೀಡುವ ಬಗ್ಗೆ ಪರಿಶೀಲಿಸುತ್ತಿರುವುದರಿಂದ ಅನುಷ್ಠಾನದ ಪ್ರಶ್ನೆಯು ಸದ್ಯಕ್ಕೆ ಉದ್ಭವಿಸುವುದಿಲ್ಲ.

ಮೈಸೂರು ತಾಲ್ಲೂಕು ಮತ್ತು ನಗರದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹ

1211 (1341) ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಮತ್ತು ನಗರಗಳಲ್ಲಿ ಸಿಬ್ಬಂದಿಯವರು ಹಾಗೂ ನಿರೀಕ್ಷಕರು : ಅಧಿಕಾರಿಗಳು ಹೆಚ್ಚಾಗಿದ್ದು ವಾಣಿಜ್ಯ ತೆರಿಗೆ ಸಂಗ್ರಹವನ್ನು ಚುರುಕುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಇಲ್ಲಿ 2 ವರ್ಷಕ್ಕಿಂತ ಮೇಲ್ಪಟ್ಟು ಕೆಲಸ ನಿರ್ವಹಿಸಲು ಅಧಿಕಾರಿಗಳು ಯಾರು? ಮತ್ತು ಅವರನ್ನು ಏಕೆ ಮುಂದುವರೆಸಲಾಗಿದೆ?

ಶ್ರೀ ಎಂ. ಶಿವಣ್ಣ (ರಾಜ್ಯ ಹಣಕಾಸು ಸಚಿವರು)

ಅ) ಮೈಸೂರು ತಾಲ್ಲೂಕು ಮತ್ತು ನಗರದಲ್ಲಿ ಅಧಿಕಾರಿ: ವಾಣಿಜ್ಯ ತೆರಿಗೆ ಪರಿವೀಕ್ಷಕರುರವರು ಅಗತ್ಯಕ್ಕಿಂತ ಹೆಚ್ಚು ಇರುವುದಿಲ್ಲ.

ಪ್ರತಿ ತಿಂಗಳು ವ್ಯಾಪಾರ ಸ್ಥಳಗಳ ತಪಾಸಣೆ ಕೈಗೊಳ್ಳಲಾಗಿದೆ ಹಾಗೂ ತೆರಿಗೆ ಬಾಕಿ ಸಂಗ್ರಹಣೆಗೋಸ್ಕರ ಪ್ರತಿ ತಿಂಗಳು ಆಂದೋಲನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವೇಳೆಯಲ್ಲಿ ವ್ಯಾಪಾರ ಸ್ಥಳಗಳಿಗೆ ಭೇಟಿ ಕೊಟ್ಟು ತೆರಿಗೆ ಬಾಕಿ ಪಾವತಿಸುವಂತೆ ಆಗ್ರಹಪಡಿಸಲಾಗುತ್ತಿದೆ. ಹಾಗೂ ಸೆಕ್ಷನ್ 14 ರ ಅಡಿಯಲ್ಲಿ ವ್ಯಾಪಾರಗಾರರ ಹಣ ಬ್ಯಾಂಕಿನಲ್ಲಿದ್ದರೆ ಅಲ್ಲಿಂದಲೂ ವಸೂಲು ಮಾಡಲಾಗುತ್ತಿದೆ. ಈ ರೀತಿ ಕಾನೂನು ಅಡಿಯಲ್ಲಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ತೆರಿಗೆ ಸಂಗ್ರಹವನ್ನು ಚುರುಕುಗೊಳಿಸಲಾಗಿದೆ. ಈ ಪ್ರಕಾರ ಕೈಗೊಂಡ ಕ್ರಮದಿಂದ ವಿಭಾಗದಲ್ಲಿ ತೆರಿಗೆ ಸಂಗ್ರಹಣೆ ಕಳೆದ ಸಾರಿಗಿಂತ ಹೆಚ್ಚಾಗಿರುತ್ತದೆ. ಕಳೆದ ಸಾಲಿನಲ್ಲಿ ಫೆಬ್ರವರಿ ಅಂತ್ಯಕ್ಕೆ 120 ಕೋಟಿ ಸಂಗ್ರಹಣೆಯಾಗಿದ್ದು ಈ ಸಾಲಿನಲ್ಲಿ ಫೆಬ್ರವರಿ ಅಂತ್ಯದವರೆಗೆ 126.22 ಕೋಟಿ ಸಂಗ್ರಹಣೆಯಾಗಿದೆ.

ಆ) ಶ್ರೀ ಬಿ.ಕೆ. ದೇವಯ್ಯ ಉಪ ಆಯುಕ್ತರು (ಗುಪ್ತ ವಾರ್ತೆ) ಮತ್ತು ಶ್ರೀ ಎಂ. ರಾಜೇಂದ್ರ ಕುಮಾರ್, ವಾಣಿಜ್ಯ ತೆರಿಗೆ ಅಧಿಕಾರಿ (ಫಿರ್ಯಾದು) ಮೈಸೂರು ಇವರು 3 ವರ್ಷಗಳಿಗಿಂತ ಹೆಚ್ಚು ಕಾಲ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಮೈಸೂರಿನಲ್ಲಿಯೇ ಬೇರೆ ಹುದ್ದೆಗೆ ವರ್ಗಾಯಿಸಲಾಗಿದೆ.

ಬೇರೆ ಅಧಿಕಾರಿಗಳು 2 ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವವರ ವಿವರ ಈ ಕೆಳಕಂಡಂತಿದೆ.

ಶ್ರೀ ಶ್ರೀ ಮತಿ :

1) ಬಿ.ಟಿ. ಬಾಣೇಗೌಡ, ವಾ.ತೆ.ಸ.ಅ. 3ನೇ ವೃತ್ತ, ಮೈಸೂರು.

2) ನಾಗರಾಜಯ್ಯ,, ವಾ.ಸ.ಸ.ಅ. 4ನೇ ವೃತ್ತ, ಮೈಸೂರು.

3) ಜಯಪ್ರಕಾಶ್, ವಾ.ತೆ.ಸಂ.ಅ., 6ನೇ ವೃತ್ತ.

4) ರಫೀಕ್ ಅಹಮದ್, ಅಪರ ವಾ.ತೆ.ಸ/ಅ.6ನೇ ವೃತ್ತ, ಮೈಸೂರು.

5) ಮಲ್ಲಿಕಾರ್ಜುನ ಸ್ವಾಮಿ, ವಾ.ತೆ. ಸ.ಅ. 1ನೇ ವೃತ್ತ ಮೈಸೂರು.

6) ಪ್ರಭುದೇವ, ವಾ.ತೆ.ಅ;, 5ನೇ ವೃತ್ತ, ಮೈಸೂರು,

7) ಮಹಾಲಕ್ಷ್ಮಿ ಭಟಟ್, ವಾ.ತೆ.ಅ. 6ನೇ ವೃತ್ತ,

8) ಬಿ.ಕೆ. ಪೂರ್ಣೇಶ್, ವಾ.ತೆ.ಅ. (ಗುಪ್ತವಾರ್ತೆ), ಮೈಸೂರು

9) ರಂಗರಾಜು, ವಾ.ತೆ.ಅ.(ಗುಪ್ತವಾರ್ತೆ), ಮೈಸೂರು. ಸರ್ಕಾರದ ವರ್ಗಾವಣೆ ನೀತಿಯ ಪ್ರಕಾರ 3 ವರ್ಷದ ಅವಧಿ ಮುಗಿದ ನಂತರ ವರ್ಗಾವಣೆ ಮಾಡಬೇಕಾಗಿರುವುದರಿಂದ ಇವರನ್ನು 2 ವರ್ಷಕ್ಕೆ ಮೀರಿ ಮುಂದುವರೆಸಲಾಗಿದೆ. ಇವರನ್ನು 3 ವರ್ಷ ಪೂರ್ಣಗೊಳಿಸಿದ ನಂತರ ವರ್ಗಾವಣೆ ನೀತಿಗನುಗುಣವಾಗಿ ವರ್ಗಾವಣೆ ಮಾಡಲಾಗುವುದು.

ಶ್ರೀ ಬಿ.ಕೆ. ದೇವಯ್ಯ, ಗುಪ್ತವಾರ್ತೆ, ಮೈಸೂರು ಹಾಗೂ ಎಂ.ರಾಜೇಂದ್ರ ಕುಮಾರ್ ಫಿರ್ಯಾದಿ, ಮೈಸೂರು ಅವರುಗಳು 3 ವರ್ಷ ಸೇವೆ ಸಲ್ಲಿಸಿದರೂ ಮೈಸೂರಿನಲ್ಲಿಯೇ ಬೇರೆ ಹುದ್ದೆಗೆ ಆಡಳಿತ ದೃಷ್ಟಿಯಿಂದ ವರ್ಗಾವಣೆ ಮಾಡಲಾಗಿರುತ್ತದೆ.

ಮೈಸೂರು ತಾಲ್ಲೂಕು ಮತ್ತು ನಗರದಲ್ಲಿರುವ ಕಾನೂನು ಮಾಪನಾಧಿಕಾರಿಗಳು

1212 (1342) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಮತ್ತು ನಗರದಲ್ಲಿರುವ ಕಾನೂನು ಮಾಪನ ಶಾಸ್ತ್ರ ಅಧಿಕಾರಿಗಳು ಎಷ್ಟು ಮಂದಿ ಕೆಲಸ ಮಾಡುತ್ತಿದ್ದಾರೆ ಮತ್ತು ಎಂದಿನಿಂದ ಕೆಲಸ ಮಾಡುತ್ತಿದ್ದಾರೆ.

ಆ) ಈ ಅಧಿಕಾರಿಗಳು ರೈತರು ಮತ್ತು ಗ್ರಾಹಕರಿಗೆ ಉಂಟಾಗಿರುವ ಅನ್ಯಾಯದ ಬಗ್ಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ ಹಾಗೂ ಎಷ್ಟು ಪ್ರಕರಣಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ? ಸಂಗ್ರಹಿಸಲಾಗಿರುವ ದಂಡದ ಮೊತ್ತ ಎಷ್ಟು?

ಶ್ರೀ ಡಿ. ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಅ) ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ಮೈಸೂರು ತಾಲ್ಲೂಕು ಮತ್ತು ನಗರದಲ್ಲಿ ಒಟ್ಟು 5 ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

1) ಶ್ರೀ ಎಸ್. ಬಿ. ರವಿಕುಮಾರ್ - ಕಾನೂನು ಮಾಪನ ಶಾಸ್ತ್ರ ಉಪನಿಯಂತ್ರಕರು. ಮೈಸೂರು ವಿಭಾಗ, ದಿ. 7-7-2000 ರಿಂದ.

2) ಶ್ರೀ ಎಂ. ಗುರುರಾಜ್ - ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು, ಮೈಸೂರು ಜಿಲ್ಲೆ. ದಿ: 7-7-2000 ರಿಂದ.

3) ಶ್ರೀ ಹೆಚ್. ಎಸ್. ವಸಂತ್ - ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು, ಮೈಸೂರು-1- ಉಪ ವಿಭಾಗ, ದಿ : 4-10-2000 ರಿಂದ.

4) ಶ್ರೀ ಸೈಫುದ್ದೀನ್ ಖಾನ - ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು, ಮೈಸೂರು-2 ಉಪವಿಭಾಗ, ದಿ: 17-7-2000 ರಿಂದ